ಲೋಕದಲ್ಲೇ ಇಲ್ಲ.

ಮುಂದೆ ನೋಡಲಾಗದೇ ಹೊರಗೆ ಬಂದು ಬಿಟ್ಟೆ.

ವಿಸಿಟರ್ಸ್ ಲಾನ್ ನಲ್ಲಿ ಮಂಜು, ಮಾಧವಿ, ಮುಕುಂದ, ಮಂದಾರಳ ಮಗ ಇನ್ನು ಯಾರೋ ನನಗೆ ಹೊಸ ಮುಖ. ಸ್ವಲ್ಪ ಏರು ದನಿಯಲ್ಲಿ ಚರ್ಚೆಯಾಗುತ್ತಿತ್ತು. ವಿಷಯವಿಷ್ಟೇ. ಅವಳು ನಾಲ್ಕು ದಿನದಿಂದ ಆಸ್ಪತ್ರೆಯಲ್ಲಿದ್ದರೂ ಯಾರಿಗೂ ವಿಷಯ ತಿಳಿಸದೇ ಮುಚ್ಚಿಟ್ಟಿದ್ದ ಸುಮುಖ. ಇದನ್ನು ಆಸ್ಪತ್ರೆಯ ಸಿಬ್ಬಂದಿಯೇ ಹೇಳಿ ಅಚ್ಚರಿ ವ್ಯಕ್ತಪಡಿಸಿದಾಗ ಅಸಹನೆ ಹೊಗೆಯಾಡಿತ್ತು. ಆದರೆ ಬಯ್ಯುವ ತೆಗಳುವ ಸ್ಥಳವಲ್ಲ, ಸಮಯವಲ್ಲ ಸುಮ್ಮನಿದ್ದೆವು. ಅಷ್ಟರಲ್ಲಿ ವೈದ್ಯರು ಕರೆ ಕಳುಹಿಸಿದರು, ಮಂಜು, ಮಾಧವಿ ಹೋದರು.

ಅವರು ಬರುವಷ್ಟರಲ್ಲಿ ಸುಮುಖನನ್ನು ಕೇಳಿಯೇ ಬಿಟ್ಟೆ. 'ಪಕ್ಕದಲ್ಲೇ ಇರುವ ನನಗೆ ಹೇಳುವುದು, ಹೋಗಲಿ ಅಕ್ಕನಿಗಾದರು ಹೇಳೋದು ಬೇಡವಾ?

'ಇಲ್ಲ ಆಂಟಿ, ಒಂದೇ ದಿನಕ್ಕೆ ಮನೆಗೆ ಬಂದು ಬಿಡ್ತಾರೆ ಅಂದುಕೊಂಡೆ'

'ಅದ್ಹೇಗೆ ಅಂದುಕೊಂಡೆ? ನೋಡು ಅಮ್ಮ ಜ್ಞಾನನೇ ಇಲ್ಲದೆ ಇದ್ದಾರೆ ..' ನಾಲ್ಕು ಬಾರಿಸುವಷ್ಟು ಕೋಪ ಬಂತು.

ಹೇಳಿ ಏನು ಪ್ರಯೋಜನವಿಲ್ಲ ಅಂತ ಸುಮ್ಮನಾದೆ.

ಅಷ್ಟರಲ್ಲೇ ಮಂಜು ಬಂದಳು. '48 ಗಂಟೆಗಳೊಳಗೆ ಪ್ರಜ್ಞೆ ಬಂದರೆ ಬಂದ ಹಾಗೆ ಅಂದಿದ್ದಾರೆ; ಇನ್ಫೆಕ್ಷನ್ ಕಿಡ್ನಿ ಲಿವರ್ ಗೆಲ್ಲ ಹರಡಿದೆಯಂತೆ'.

ಎಲ್ಲರೂ ಮತ್ತೆ ಸುಮುಖನನ್ನೇ ಕೆಕ್ಕರಿಸಿದೆವು.

'ಅಡ್ಮಿಟ್ ಆಗೋಕ್ಕೆ ಮುಂಚೆ ನಿಮಗೂ ನನಗು ತಿಳಿಸು ಅಂತ ಹೇಳಿದ್ದಳಂತೆ ಮಂದಾ.. ಆದರೆ ಇವನು ಹೇಳಿಲ್ಲ ನೋಡಿ'

ಸುಮುಖ ನಿರ್ಭಾವುಕನಾಗಿ ನಮ್ಮತ್ತ ನೋಡಿದ.

'ಇವನು ಮಾಡುವ ಕೆಲಸ ಎಷ್ಟು ಕೆಟ್ಟ ಪರಿಣಾಮ ಬೀರಿದೆ ಈಗಲಾದರೂ ಅರ್ಥವಾಯ್ತಾ?' ಮುಕುಂದ ಸಿಡುಕಿದ. ಅಕ್ಕನನ್ನು ಕಳೆದುಕೊಂಡರೆ ಎಂಬ ಭಯ ಒಂದೆಡೆ ಕಾಡತೊಡಗಿತ್ತು ಅವನಿಗೆ.

ಇನ್ನು ಅಲ್ಲಿ ಕಾಯುವುದರಿಂದ ಉಪಯೋಗವಿಲ್ಲೆಂದು ನಾನು ಹೊರಡಲು ಅಣಿಯಾದೆ. 'ಯಾವುದೇ ಸಮಯ ನೀವು ಫೋನ್ ಮಾಡಿ ಬರ್ತೀನಿ' ಎಂದು ಅಹಸ್ಕನಿಗೆ ಕರೆ ಮಾಡಿದೆ.

* * *



ರಾತ್ರಿಯೆಲ್ಲಾ ಹೊರಳಾಡಿದ್ದೆ ಆಯಿತು ನಿದ್ದೆ ಸುಳಿಯದು. ಆಲೋಚನೆಯೆಲ್ಲ ಮಂದಾರಳ ಸುತ್ತ. ಒಂದಲ್ಲ ಎರಡಲ್ಲ, ಮೂರು ದಶಕಗಳ ಸ್ನೇಹ ನನಗೂ ಆ ಕುಟುಂಬಕ್ಕೂ. ಮಂದಾರ ನನಗಿಂತ ಒಂದು ವರ್ಷಕ್ಕೆ ದೊಡ್ಡವಳು. ಯುನಿವರ್ಸಿಟಿಯಲ್ಲಿ ಪರಿಚಯವಾದದ್ದು. ಅವರ ಮನೆಯು ನಮ್ಮ ಮನೆಗೆ 15 ನಿಮಿಷದ ಕಾಲ್ನಡಿಗೆ. ಅವಳಕ್ಕ ಮಂಜುಲತಾ ಅವಳಿಗಿಂತ ನನ್ನೊಂದಿಗೆ ಆತ್ಮೀಯಳಾಗಿದ್ದಳು. ಮಾಧವಿ, ಮುಕುಂದ ಚಿಕ್ಕವರು. ಮುಂದೆ ನನಗೆ ಬ್ಯಾಂಕ್‌ನಲ್ಲಿ ಉದ್ಯೋಗ ದೊರಕಿ ಮೈಸೂರಿಗೆ ಮದುವೆಯಾಗಿ ಹೋದ ಮೇಲೂ ಅವರ ಸಂಪರ್ಕ ಇತ್ತು. ಮಂಜುಲತಾಳ ನಂತರ ಮಂದಾರಳಿಗೂ ಮದುವೆ ಆಯ್ತು. ನನಗೆ ಹೋಗಲಾಗಿರಲಿಲ್ಲ. ಅಹಸ್ಕರ ಮೂರು ತಿಂಗಳ ಮಗು. ನಂತರದ ದಿನಗಳಲ್ಲಿ ಮಂದಾರನ ದಾಂಪತ್ಯ ಅಷ್ಟೇನು ಸರಿಯಿಲ್ಲ ಎಂಬ ಸುದ್ದಿ. ಒಮ್ಮೆ ಬಿಡುವು ಮಾಡಿಕೊಂಡು ಮಂಜುವಿನ ಮನೆಗೆ ಹೋದಾಗ ಮಂದಾರ ಮರಳಿ ತವರಿಗೆ ಬಂದ ವಿಷಯ ತಿಳಿದು ನೋವಾಗಿತ್ತು.

ನೋಡಲು ಎಷ್ಟು ಚಂದ, ಬುದ್ದಿವಂತೆ ಅವಳಿಗೆ ಹೀಗೆ ..?

ನಿಜ, ಕಾಮಾಲೆ ಕಣ್ಣು, ಅವಳ ಅಂದ ಬುದ್ದಿವಂತಿಕೆಯನ್ನು ಸಂಶಯದಿಂದ ನೋಡಿ ಹೊರಗೆ ಹಾಕಿದ್ದಾರೆ.

ಇವಳೋ ಮೊದಲೇ ಬಾಯಿ ಸತ್ತವಳು.. ವಾಪಸ್ ಕೊಡೋಕ್ಕೆ ಬರೋಲ್ಲ , ಕೇಸ್ ನಡೀತಿದೆ.

ಮಂದಾರ ಸಪ್ಪಗಿದ್ದಳು.

'ಹೋಗ್ಲಿ ಬಿಡು ಮಕ್ಕಳು ಗಿಕ್ಕಳು ಅಂತ ಆಗಿ ಇನ್ನು ರಗಳೆಯಾಗಿ ಹೊರಗೆ ಬರೋಕ್ಕಿಂತ ಇದು ವಾಸಿ ಬೇರೆ ಬದುಕನ್ನು ಕಟ್ಟಿಕೋಬಹುದು' ಅಂದಿನ ದಿನಕ್ಕೆ ನನಗೆ ತೋಚಿದ್ದು ನಾ ಹೇಳಿದ್ದೆ.

'ನೀನು ಸರಿಯಾಗಿ ಹೇಳಿದೆ ಮೀರಾ, ಹತ್ತಿರಕ್ಕೂ ಸರಿಯದೆ ಮಕ್ಕಳಾಗಬೇಕೆಂದರೆ ... '

ಮಂದಾರ ಮುಸಿಮುಸಿ ಅತ್ತರೆ ಮಂಜು ಕೋಪದಿಂದ ಕೆಂಪಾಗಿದ್ದಳು.

'ಅವನೊಬ್ಬ ನಾಲಾಯಕ್ ಮನುಷ್ಯ'

ಎಲ್ಲವೂ ಅರ್ಥವಾಗಿತ್ತು. ಸ್ವಭಾವತಃ ಅತಿ ಧೈರ್ಯಶಾಲಿ ಮಂಜು, ಅಷ್ಟೇ ಪುಕ್ಕಲು ಮಂದಾರ.

ಅಹಸ್ಕರನಿಗೆ ಹತ್ತನೆಯ ತರಗತಿಯಲ್ಲಿದ್ದಾಗ ನನ್ನವರ ವಿಯೋಗವಾಗಿದ್ದು ಅವರಿಲ್ಲದ ಮೇಲೆ ಆ ಊರು ಬೇಡ ಎಂದು ಕಾಲೇಜಿಗೆ ಮೈಸೂರಿನಿಂದ ವಾಪಸಾಗಿ ಅಮ್ಮನ ಮನೆಗೆ ಹತ್ತಿರ ಮನೆ ಕೊಂಡಿದ್ದೆ. ಅಷ್ಟರಲ್ಲೇ ಮಂದಾರನಿಗೆ ಮರು ಮದುವೆಯಾಗಿ ಮಗನಿಗೆ ತಾಯಿಯಾಗಿದ್ದಳು ಅನ್ನುವವರೆಗೆ ವಿಷಯ ತಿಳಿದಿತ್ತು. ಇಲ್ಲಿ ಬಂದ ನಂತರ ಮಂದಾರ ದೂರದ ಬಿಜಾಪುರದಲ್ಲಿ ನೌಕರಿಯಲ್ಲಿದ್ದುದು ತಿಳಿದು ಸಂತೋಷವಾಯಿತು. ಬೆನ್ನಲ್ಲೇ 'ಈ ಬಾರಿಯೂ ಮೋಸವಾಯ್ತು ಮೀರಾ.. ' ಮ್ಯಾಟ್ರಿಮೋನಿಯಲ್ ಮೂಲಕ ವರ ಗೊತ್ತಾಗಿದ್ದು ಅವನಿಗೂ ಎರಡನೇ ಮದುವೆ ಹೆಂಡತಿ ಮಕ್ಕಳಿಂದ ದೂರವಾಗಿ ಏಳೆಂಟು ವರ್ಷವಾಯ್ತು ಅಂತ ನಂಬಿದೆವು. ಆರು ತಿಂಗಳು ಸಂಸಾರ ಮಾಡಿದರು ಚೆನ್ನಾಗಿಯೇ ಇದ್ದರು. ಒಂದು ದಿನ ಇದ್ದಕ್ಕಿದ್ದಂತೆ ಮೊದಲ ಹೆಂಡತಿ ಕಡೆಯವರು ಬಂದು ಇವನನ್ನು ಎಳಕೊಂಡು ಹೋದ್ರು. ಇವಳು ಸೊಲ್ಲೆತ್ತಲಿಲ್ಲ ಆರು ವಾರಗಳ ಗರ್ಭಿಣಿ.. ಮಗುವನ್ನು ಉಳಿಸಿಕೊಳ್ತೀನಿ ಅಂತ ಹಠ ಹಿಡಿದು ಹೆತ್ತಳು. ಒಳ್ಳೆ ಕೆಲಸ ಸಿಕ್ತು ಅಂತ ಮಗೂನೂ ಕರ್ಕೊಂಡು ಹೊರಟುಬಿಟ್ಟಳು. ಸುಮುಖ ಅಂತ, ಅವನಿಗೂ ಹನ್ನೆರಡು ವರ್ಷ ಆಯಿತು'. 'ಹೋಗ್ಲಿ ಬಿಡಿ ಹೇಗೋ ಅವಳ ಪಾಡಿಗೆ ಅವಳಿದ್ದಾಳಲ್ಲ; ಬದುಕಲು ಗುರಿಯೊಂದಿದೆ'ಎಂದಿದ್ದೆ, ಸುಮುಖನ ಮುದ್ದು ಮುಖವನ್ನು ಊಹಿಸಿಕೊಳ್ಳುತ್ತ.

ಅಲ್ಲಿಂದಾಚೆ ವರ್ಷಕ್ಕೋ ಎರಡು ವರ್ಷಕ್ಕೋ ಭೇಟಿಯಾದರೂ ಪರಸ್ಪರ ವಿಷಯ ವಿನಿಮಯವಾಗುತಿತ್ತು.

ಮಾಧವಿ ,ಮುಕುಂದ ಮದುವೆಯ ತಂಟೆಯೇ ಬೇಡವೆಂದು ಉಳಿದು ಕೊಂಡಿದ್ದರು. ನಾವು ಭೇಟಿಯಾಗಲಿ ಬಿಡಲಿ ಗಳಿಗೆಗೊಮ್ಮೆ ಮಾತನಾಡದಿದ್ದರೂ ನಮ್ಮ ಸ್ನೇಹ ಹಸಿರಾಗೇ ಇತ್ತು.

ತೀರಾ ಎರಡು ವರ್ಷಗಳ ಹಿಂದೆ ಮಂದಾರಳೂ ಇಲ್ಲಿಗೆ ಶಿಫ್ಟ್ ಆದಾಗ ಸಂತೋಷ ಹೇಳತೀರದು. ನಾನೂ ಮಂಜು ಮಂದಾರ ನೆನೆದಾಗ ಭೇಟಿಯಾಗ ಬಹುದಲ್ಲ? ಆ ಸಂತೋಷ ಬಹಳ ಕಾಲ ಉಳಿಯಲಿಲ್ಲ ಕಾರಣವಿಷ್ಟೇ ತೆಳ್ಳಗಿದ್ದ ಮಂದಾರ ಗುರುತು ಸಿಗದ ಮಟ್ಟಿಗೆ ದಪ್ಪಗಾಗಿದ್ದಳು. ಮೆನೋಪಾಸ್, ಥೈರಾಯ್ಡ್ ಕೃಪೆ ಎಂದು ತುಟಿಯರಳಿಸಿ ಕಣ್ಣಲ್ಲಿ ಕಂಬನಿ ಮಿಡಿದಿದ್ದಳು. ಅದಕ್ಕಿಂತ ಹೆಚ್ಚಿನ ಮಾನಸಿಕ ವೇದನೆ ಬಗೆಗೆ ತಿಳಿದದ್ದು ನಂತರದ ದಿನಗಳಲ್ಲಿ.

ಮಂದಾರನ ಮನೆಗೆ ಯಾರು ಹೋದರೂ ಅದರಲ್ಲೂ ಮುಖ್ಯವಾಗಿ ಅವಳ ಸಹೋದರ ವರ್ಗ, ಸುಮುಖ ರೌದ್ರಾವತಾರ ತಾಳಿ ಮಂದಾರಳನ್ನು ಕಟುನುಡಿಗಳಿಂದ ಹಿಂಸಿಸುತಿದ್ದನಂತೆ. ಇದನ್ನು ಸ್ವತಃ ಮಂದಾರಳೆ ಹೇಳಿದ ಮೇಲೆ ಯಾರೂ ಅತ್ತ ಸುಳಿಯಲು ಇಷ್ಟಪಡುತ್ತಿರಲಿಲ್ಲ. ನಾನು ಸ್ನೇಹಿತೆಯಲ್ಲ ಪರವಾಗಿಲ್ಲವೆಂದುಕೊಂಡು ಒಂದೆರಡು ಬಾರಿ ಹೋಗಿದ್ದೆ. ಮಂದಾರಳ ಸ್ವಭಾವದಲ್ಲಿ ವ್ಯತ್ಯಾಸ ಕಂಡಿತ್ತು. ಕೊನೆಗೆ ಒಮ್ಮೆ ನಮ್ಮ ಮನೆಗೆ ಕರೆಸಿಕೊಂಡಾಗ ಮಗನ ಬಗ್ಗೆ ದುಃಖ ತೋಡಿಕೊಂಡಿದ್ದಳು. ಅಪ್ಪನ ಪ್ರೀತಿ ವಿಶ್ವಾಸಗಳಿಲ್ಲದ ಬಾಲ್ಯ, ಕಲಿಕೆಯಲ್ಲಿ ತೀರಾ ಹಿಂದಿದ್ದರಿಂದ ಶಾಲೆ, ಗೆಳೆಯರಿಂದ ಆದ ಅವಮಾನ, ತನ್ನ ಓರಗೆಯವರು ಒಡಹುಟ್ಟಿದವರು ಇವನ ಒಳ್ಳೆಯದಕ್ಕೆಂದು ನಾಲ್ಕು ಮಾತು ಹೇಳಿದರೂ ಅಸಹನೆ ಕೋಪಗಳಿಂದ ತನ್ನ ಮೇಲೆ ಕಿರುಚಾಡುವುದು, ಒಂದೇ ಎರಡೇ ಮೀರಾ ನನಗೆ ಸಾಕಾಗಿ ಹೋಗಿದೆ. ಹೊಟ್ಟೆಪಾಡಿಗೆ ನಾನು ಉದ್ಯೋಗಕ್ಕೆ ಅದರಲ್ಲೂ ಊರೂರು ಸುತ್ತುವ ಕೆಲಸ ಇವನನ್ನು ಪುಸಲಾಯಿಸಿ ಸುಮ್ಮನಾಗಿಸಲು ಕೇಳಿದ್ದೆಲ್ಲ ಒದಗಿಸುವುದರಲ್ಲೇ ಜೀವನ ಸವೆಯಿತು. ನನ್ನೆಣಿಕೆಯ ಮಟ್ಟದ ಹತ್ತಿರವೂ ಬರಲಿಲ್ಲ. ಅವನಿಗೆ